O.S 2/2023

P.W.5

ಸಾಕ್ಷಿಯನ್ನು ದಿಃ 22-04-2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ.ವಿ.ಎಸ್.ಪಿ.ಪಿ 1 ನೇ ಪ್ರತಿವಾದಿ ಪರ ವಕೀಲರಿಂದ

ಪ್ರತಿವಾದಿ ನಂ.1 ರಿಂದ 4 ರವರ ಪರಿಚಯ ಇರುವುದಿಲ್ಲ. ನನ್ನ ಜಮೀನಿನ ಸರ್ವೆ ನಂ.27 ಆಗಿರುತ್ತದೆ. ವಾದಿಗಳ ಜಮೀನು ನಮ್ಮ ಜಮೀನು ಪೂರ್ವ ದಿಕ್ಕಿಗೆ ಇರುತ್ತದೆ. ಅವರ ಜಮೀನಿನ ಅಳತೆ ನನಗೆ ಗೊತ್ತಿರುವುದಿಲ್ಲ. ವಾದಿಯವ ಸರ್ವೇ ನಂ.26/2 ಬಿ ಕ್ಷೇತ್ರ 3 ಎಕರೆ 17 ಗುಂಟೆ ಇರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಗಳ ಪೈಕಿ ಮುರಗೇಪ್ಪನ ಪರಿಚಯ ಇರುತ್ತದೆ. ಪ್ರತಿವಾದಿ ನಂ.1 ಮತ್ತು 2 ಎಲ್ಲಿ ವಾಸವಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಮುರಗೇಪ್ಪ ಜಮಗಿ ಇವರಿಗೆ ದಾವಾ ಆಸ್ತಿ ಹೇಗೆ ಬಂದಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಮರಗೇಪ್ಪರವರ ಮೂಲ ಪುರಷ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಮುರಗೇಪ್ಪನ ಅಜ್ಜನ ಹೆಸರು ಸಲವಪ್ಪ ಎಂದರೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಸರ್ವೆ ನಂಬರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.26 ರ ಚಕಬಂದಿ ಹೇಳಲು ನನಗೆ ಬರುವುದಿಲ್ಲ.

2. 1 ಮತ್ತು 2 ಪ್ರತಿವಾದಿಯರು ವಡವಿ ಹೊಸೂರಿನವರು ಇದ್ದರು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಯನ್ನು ವ್ಯವಸಾಯ ಮಾಡಿಕೊಂಡು ಇರುತ್ತಾರೆ ಎಂದರೆ ಸರಿಯಲ್ಲ. ಮುರುಗೇಪ್ಪ ಮತ್ತು ನಾನು ಒಳ್ಳೆಯ ಸ್ನೇಹಿತರೆಂದರೆ ಪರಿಚಯ ಇರುತ್ತದೆ ಎಂದು ನುಡಿಯುತ್ತಾರೆ. ಮುರುಗೇಪ್ಪನ ಕುಟುಂಬದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ. ಗುರುಪಾದಪ್ಪನ ವಂಶಸ್ಥರು ಮುರುಗೇಪ್ಪನಾಗಿರುತ್ತಾನೆ ಎಂದು ನನ್ನ ಅಜ್ಜ ಹೇಳುತ್ತಿದ್ದರು. ಚನ್ನಪ್ಪನ ಜಮೀನನ್ನು ಲಪಟಾಯಿಸುವುದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಚನ್ನಪ್ಪ ಕುಟುಂಬಕ್ಕೆ Tenancy ಖಾಯ್ದೆಯಡಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

O.S 2/2023

P.W.5

<u>ಪಾಟೀ ಸವಾಲುಃ **3** ಮತ್ತು 4 ನೇ ಪ್ರತಿವಾದಿ ಪರ ಶ್ರೀಪಿ.ಎಮ್.ಎನ್ ವಕೀಲರಿಂದ</u>

3 ಮತ್ತು 4 ನೇ ಪ್ರತಿವಾದಿಯರು ಮತ್ತು ವಾದಿಯರು ಸೇರಿಕೊಂಡು ಸಾಗುವಳಿ ಮಾಡುತ್ತಾರೆ ಎಂದರೆ ಸರಿ. ಆದ್ದರಿಂದ ಅವರಿಗೂ ಜಮೀನಿನಲ್ಲಿ ಸಮನಾದ ಹಕ್ಕಿದೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

**(**ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓದಿ ಹೇ ಕೇ ಸರಿ ಅದೆ.

Sd/22-04-2026

ಹಿರಿಯ ದಿವಾಣಿ ನ್ಯಾಯಾಧೀಶರು

ಸಾಕ್ಷಿದಾರರ ಸಹಿಃ

ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ